ಹಂತವನ್ನು ಅಭ್ಯಸಿಸಿ ಶಿಫಾರಸ್ಸು ಮಾಡಲು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯದ ಹಿರಿಯ ಅಧಿಕಾರಿಗಳ ಜಂಟಿ ಸಮಿತಿಯನ್ನು ನೇಮಿಸಲಾಗಿದೆ.

ಇ) ಮಹಾಜನ ವರದಿಯನ್ನು ಅನುಷ್ಠಾನಕ್ಕೆ ತರುವುದರ ಮೂಲಕ ಭಾರತ ಸರ್ಕಾರವು ಕರ್ನಾಟಕಕ್ಕೆ ನ್ಯಾಯವನ್ನು ದೊರಕಿಸಿಕೊಡುವುದೆಂಬ ಭರವಸೆಯನ್ನು ಕರ್ನಾಟಕ ಸರ್ಕಾರವು ಹೊಂದಿದೆ.

ಮಹಾಜನ ವರದಿಯ ಅನುಷ್ಠಾನ

೧೩೧೭. ಶ್ರೀ ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯ ಸರ್ಕಾರವು ಮಹಾಜನ ವರದಿಯನ್ನು ಅನುಷ್ಠಾನಕ್ಕೆ ತರಲು ಕೈಗೊಂಡ ಕ್ರಮಗಳೇನು?

ಆ) ಈ ವರದಿಯ ಜಾರಿಗಾಗಿ ಪ್ರಧಾನ ಮಂತ್ರಿಯವರ ಬಳಿಗೆ ವಿಧಾನ ಮಂಡಲದ ಸದಸ್ಯರುಗಳ ಸಮಿತಿಯನ್ನು ಕಳುಹಿಸಿಕೊಡುವ ಯೋಜನೆ ಸರ್ಕಾರಕ್ಕಿದೆಯೇ?

ಇ) ಹಾಗಿದ್ದಲ್ಲಿ ಯಾವಾಗ ಕಳುಹಿಸಲಾಗುವುದು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ಕರ್ನಾಟಕ ಸರ್ಕಾರವು ಮಹಾಜನ ವರದಿಯನ್ನು ಅನುಷ್ಠಾನಕ್ಕೆ ತರುವಂತೆ ದೃಢವಾಗಿ ಭಾರತ ಸರ್ಕಾರವನ್ನು ಒತ್ತಾಯಿಸುತ್ತಿದೆ. ಈ ವಿಷಯದಲ್ಲಿ ದಿನಾಂಕ. ೨೦-೮-೧೯೮೫, ೧೧-೯-೧೯೮೫ ಮತ್ತು ೯-೧೦-೧೯೮೫ರಂದು ಮೂರು ಪತ್ರಗಳನ್ನು ಪ್ರಧಾನ ಮಂತ್ರಿಯವರಿಗೆ ಬರೆಯಲಾಗಿದ್ದು ಮಹಾಜನ ವರದಿ ಅಂತಿಮವೆಂದೂ ಮತ್ತು ಇದನ್ನು ಅನುಷ್ಠಾನಕ್ಕೆ ತರದಿದ್ದರೆ ಕರ್ನಾಟಕಕ್ಕೆ ಘೋರ ಅನ್ಯಾಯವಾಗುವುದೆಂದೂ ಮನವರಿಕೆ ಮಾಡಿಕೊಡಲಾಗಿದೆ.

ಆ) ಮಹಾಜನ ವರದಿಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಬೇಕೆಂದು ಭಾರತ ಸರ್ಕಾರವನ್ನು ಒತ್ತಾಯಿಸುವ ಒಮ್ಮತದ ನಿರ್ಣಯವನ್ನು ಕರ್ನಾಟಕ ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳು ೨೭-೩-೧೯೮೫ರಂದು ಅಂಗೀಕರಿಸಿವೆ.

ಇ) ಹೌದು ಸರ್ವಪಕ್ಷೀಯ ಶಾಸಕರ ನಿಯೋಗವೊಂದನ್ನು ಪ್ರಧಾನ ಮಂತ್ರಿಗಳ ಬಳಿ ಆದಷ್ಟು ಬೇಗ ಕೊಂಡೊಯ್ಯಲು ಕ್ರಮ ಕೈಗೊಳ್ಳಲಾಗಿದೆ.

ಅಖಿಲ ಭಾರತ ಸೇವಾ ಅಧಿಕಾರಿಗಳು ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡ ಬಗ್ಗೆ

೧೪೯೦(ಬಿ) ಶ್ರೀ ಎಸ್. ಎಸ್. ಪೇಡ್ (ಇಂಡಿ).—ಮಾನ್ಯ ಮುಖ್ಯಮಂತ್ರಿಯವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಎ) ರಾಜ್ಯದಲ್ಲಿ ೧-೧-೧೯೮೫ರಲ್ಲಿದ್ದಂತೆ ಸೇವೆ ಸಲ್ಲಿಸುತ್ತಿರುವ ಅಖಿಲ ಭಾರತ ಸೇವಾ ಅಧಿಕಾರಿಗಳ ಒಟ್ಟು ಸಂಖ್ಯೆ.

ಬಿ) ಇವರ ಪೈಕಿ ಎಷ್ಟು ಜನ ಅಧಿಕಾರಿಗಳು ಸೇವೆಗೆ ಸೇರಿದ ನಂತರ ಬೆಂಗಳೂರು ಪಟ್ಟಣ ಹಾಗು ಗ್ರಾಮಾಂತರ ಜಿಲ್ಲೆಯಲ್ಲಿ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ.

ಸಿ) ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಲ್ಲಿ ಯಾರಾದರೂ ಅಧಿಕಾರಿಗಳು ಭೂ ಸಂಧಾರಣಾ ಕಾಯ್ದೆಯನ್ನು ಉಲ್ಲಂಘಿಸಿದ್ದಾರೆಯೇ. (ಹೆಸರುಗಳನ್ನು ನಮೂದಿಸಿ).

ಡಿ) ಹಾಗಾದಲ್ಲಿ, ಇಂಥವರ ವಿಷಯದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ರಾಮಕೃಷ್ಣ ಹೆಗಡೆ (ಮಾನ್ಯ ಮಂತ್ರಿಯವರು)

ಎ) ಐ.ಎ.ಎಸ್. — ೨೪೨
ಐ.ಪಿ.ಎಸ್. — ೧೦೮
ಐ.ಎಫ್.ಎಸ್. — ೧೦೮

ಬಿ) ಐ.ಎ.ಎಸ್. — ೦೪
ಐ.ಪಿ. ಸ್. — —
ಐ.ಎಫ್.ಎಸ್. — ೦೧

ಸಿ) ಕಾನೂನು ಉಲ್ಲಂಘಿಸಿದ ಯಾವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.

ಡಿ) ಉಪ ಪ್ರಶ್ನೆ (ಸಿ)ಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸಭೆಯ ಮುಂದಿಡಲಾದ ಕಾಗದಪತ್ರಗಳು

I ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯ ಮಂತ್ರಿಯವರು).—ಅಧ್ಯಕ್ಷರೆ,ನಾನು ಈ ಕೆಳಗಿನ ಕಾಗದ ಪತ್ರಗಳನ್ನು ಸಭೆಯಮುಂದೆ ಮಂಡಿಸುತ್ತೇನೆ.

೧೯೫೨ನೇ ಇಸವಿಯ ಕರ್ನಾಟಕ ಪುರಾಣ ತೆರಿಗೆ ಶಾಸನದ ೮ (ಎ)ನ ಕಲಮಿನ ಮೇರೆಗೆ :

೧) ಗೊಬ್ಬರ ಕಾರ್ಖಾನೆಗಳು ಡೈಅಮೋನಿಯಂ ಫಾಸ್ಫೇಟ್ ಉತ್ಪಾದಿಸಲು ಉಪಯೋಗಿಸುವ ಸಾಧನ ಸಾಮಗ್ರಿಗಳನ್ನು ಪುರಾಣ ಮಾಡುವಾಗ ನೀಡಬೇಕಾದ ತೆರಿಗೆಯನ್ನು ವಿನಾಯಿತಿಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೧೯೮೮ನೇ ಮಾರ್ಚ್ ೨೦ರಂದು ಹೊರಡಿಸಲಾದ ಎಫ್.ಡಿ.೭೫ ಸಿ.ಎಸ್.ಎಲ್. ೮೮ನೇ ಕ್ರಮಾಂಕದ ಅಧಿಸೂಚನೆ.

೨) ಅಸ್ಫಾಲ್ಟಿಕ್ ಮೇಲ್ಪಾವಣಿಯನ್ನು ಪುರಾಣ ಮಾಡುವಾಗ ತೆರಿಗೆಯನ್ನು ಶೇಕಡ ಎಂಟಕ್ಕೆ ಇಳಿಸುವ ಬಗ್ಗೆ ಸಂಬಂಧಿಸಿದಂತೆ ದಿನಾಂಕ ೧೯೮೮ನೇ ಮಾರ್ಚ್ ೩೦ ರಂದು ಹೊರಡಿಸಲಾದ ಎಫ್.ಡಿ. ೮೨ ಸಿ ಎಸ್ಎಲ್ ೮೮ (೧)ನೇ ಕ್ರಮಾಂಕದ ಅಧಿಸೂಚನೆ.

೩) ಎಲೆಕ್ಟ್ರಾನಿಕ್ ಕ್ಯಾಲ್ಕ್ಯುಲೇಟರುಗಳನ್ನು ಪುರಾಣ ಮಾಡುವಾಗ ತೆರಿಗೆಯನ್ನು ಶೇಕಡ ಳಕ್ಕೆ ಇಳಿಸುವ ಬಗ್ಗೆ ಸಂಬಂಧಿಸಿದಂತೆ ದಿನಾಂಕ ೧೯೮೮ನೇ ಮಾರ್ಚ್ ೨೦ರಂದು ಹೊರಡಿಸಲಾದ ಎಫ್ಡಿ ೮೨ ಸಿ ಎಸ್ಎಲ್ ೮೮ನೇ (೨)ನೇ ಕ್ರಮಾಂಕದ ಅಧಿಸೂಚನೆ.

೪) ಮೋಟಾರು ಕಾರು ಪುರಾಣ ಮಾಡುವಾಗ ನೀಡಬೇಕಾದ ತೆರಿಗೆಯನ್ನು ವಿನಾಯಿತಿ ಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೧೯೮೮ನೇ ಮಾರ್ಚ್ ೨೦ ರಂದು ಹೊರಡಿಸಲಾದ ಎಫ್ಡಿ೩೩ ಸಿಎಸ್ಎಲ್ ೮೮ನೇ (೩)ನೇ ಕ್ರಮಾಂಕದ ಅಧಿಸೂಚನೆ,

೫) ಬಯೋ ಮಾಸ್ಗ್ಯಾಸ್, ಹಪ್ಪಳ, ಪಾಪಡಿಗಳಿಂದ ಎಳೆಯಲ್ಪಡುವ ಗಾಡಿಗಳು,ಮನುಷ್ಯರ ಕೂದಲು ಮತ್ತು ಇತರ ವಸ್ತುಗಳನ್ನು ಪುರಾಣ ಮಾಡುವಾಗ ನೀಡಬೇಕಾದ ತೆರಿಗೆಯನ್ನು ವಿನಾಯಿತಿ ಗೊಳಿಸುವುದಕ್ಕೆ ಸಂಬಂಧಿಸಿದಂತೆ ದಿನಾಂಕ ೨೦ನೇ ಮಾರ್ಚ್ ೧೯೮೮ರಂದು ಹೊರಡಿಸಲಾದ ಎಫ್ಡಿ೮೨ ಸಿಎಸ್ಎಲ್ ೮೮(೪)ನೇ ಕ್ರಮಾಂಕದ ಅಧಿಸೂಚನೆ.

೬) ಅಧಿಸೂಚನೆ ಎಫ್ಡಿ ೧೪ ಸಿಎಸ್ಎಲ್ ೮೨ ದಿನಾಂಕ ೨೮-೨-೧೯೮೨ರಂದು ಹಿಂತೆಗೆದು ಕೊಳ್ಳುವ ಬಗ್ಗೆ ಸಂಬಂಧಿಸಿದಂತೆ ದಿನಾಂಕ ೨೦ನೇ ಮಾರ್ಚ್ ೧೯೮೮ರಂದು ಹೊರಡಿಸಲಾದ ಎಫ್ಡಿ೮೨ ಸಿಎಸ್ಎಲ್ ೮೮ (೫)ನೇ ಅಧಿಸೂಚನೆ.

೭) ಪೆಟ್ರೋಲ್, ಧಾನ್ಯಗಳು, ಹೊಲಿಗೆಯಂತ್ರ ಮತ್ತು ಇತರೆ ವಸ್ತುಗಳ ಮೇಲೆ ತೆರಿಗೆ ಕಡಿಮೆ ಮಾಡುವುದರ ಬಗ್ಗೆ ಸಂಬಂಧಿಸಿದಂತೆ ದಿನಾಂಕ ೩೦ನೇ ಮಾರ್ಚ್ ೧೯೮೮ರಂದು ಹೊರಡಿಸಲಾದ ಎಫ್ಡಿ ೮೨ ಸಿಎಸ್ಎಲ್ ೮೮ (೬)ನೇ ಅಧಿಸೂಚನೆ.